ವಿಷಯಾನುಕ್ರಮಣಿಕೆ

ಶ್ರೀಶಂಕರಾಚಾರ್ಯರವರ ಗ್ರಂಥಗಳು

# ಪ್ರಕರಣಗಳು

ಸಂಪುಟ ೨

(ಸ್ವಾತ್ಮನಿರೂಪಣ, ಮನೀಷಾಪಂಚಕ, ನಿರ್ವಾಣಷಟ್ಕ,
ಬ್ರಹ್ಮಾನುಚಿಂತನ, ಸದಾಚಾರಾನುಸಂಧಾನ, ದಶಶ್ಲೋಕೀ)

ಬರೆದವರು :
ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು

ಪ್ರಕಾಶಕರು :
ಅಧ್ಯಾತ್ಮಪ್ರಕಾಶಕಾರ್ಯಾಲಯ
ಹೊಳೆನರಸೀಪುರ – ೫೭೩ ೨೧೧
೨೦೦೨
ದೂರವಾಣಿ: ೦೮೧೭೫–೭ ೩೮೨೦

ಅಧ್ಯಾತ್ಮಗ್ರಂಥಾವಳಿ

ಶ್ರೀಶಂಕರಾಚಾರ್ಯವಿರಚಿತ

# ಬ್ರಹ್ಮಾನುಚಿಂತನ

ಸಂಸ್ಕೃತಮೂಲ, ಅನುವಾದ, ಟಿಪ್ಪಣಿ – ಮುಂತಾದವುಗಳೊಡನೆ

ಬರೆದವರು :
ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು

ಕ್ರಮಾಂಕ ೨೬

ಪ್ರಕಾಶಕರು :
ಅಧ್ಯಾತ್ಮಪ್ರಕಾಶಕಾರ್ಯಾಲಯ
(ಪಬ್ಲಿಕ್ ಛಾರಿಟಬಲ್ ಟ್ರಸ್ಟ್)
ಹೊಳೆನರಸೀಪುರ.
೨೦೦೨

ಮೊದಲನೆಯ ಸಂಸ್ಕರಣ ೧೯೫೬ (೧೦೦೦ ಪ್ರತಿಗಳು)
ಎರಡನೆಯ ಮುದ್ರಣ ೨೦೦೨ ( ೧೦೦೦ ಪ್ರತಿಗಳು)

© ಇದರ ಹಕ್ಕುಗಳೆಲ್ಲವೂ ಅಧ್ಯಾತ್ಮಪ್ರಕಾಶಕಾರ್ಯಾಲಯದವು
**All Rights Reserved**

ಅಕ್ಷರಜೋಡಣೆ :
**ಪ್ರಶಾಂತ್ ಎಂಟರ್‌ಪ್ರೈಸಸ್**
ನಂ. ೪೫, ೩ನೇ ಮುಖ್ಯರಸ್ತೆ, ನಾಗಸಂದ್ರ
ತ್ಯಾಗರಾಜನಗರ ಅಂಚೆ, ಬೆಂಗಳೂರು – ೨೮
✆ ೬೭೬೪೬೫೦

ಮುದ್ರಣಸ್ಥಾನ :
**ಸ್ಟಾಂಡರ್ಡ್ ಪ್ರಿಂಟರ್ಸ್**
ಶಂಕರ ಮಠದ ರಸ್ತೆ, ಶಂಕರಪುರಂ
ಬೆಂಗಳೂರು – ೫೬೦ ೦೦೪
✆ ೬೫೨೧೫೨೭

## ಪೀಠಿಕೆ

ಆಚಾರ್ಯರ ಹೆಸರಿನಲ್ಲಿ ಪ್ರಚಾರದಲ್ಲಿರುವ ಪ್ರಕರಣಗಳಲ್ಲಿ ಇದು ಒಂದು. ಈ ಪ್ರಕರಣದಲ್ಲಿನಾನು ಬ್ರಹ್ಮವೇ ಎಂದು ಚಿಂತಿಸುತ್ತಿರಬೇಕು, ಇಲ್ಲದಿದ್ದರೆ ಆ ಅರ್ಥದ ವಾಕ್ಯವನ್ನಾದರೂ ಅಭ್ಯಾಸಮಾಡುತ್ತಿರಬೇಕು – ಎಂದು ಹೇಳಿರುವದಕ್ಕೆ ಶ್ರುತಿಯ ಆಧಾರವಿಲ್ಲ. ಆಚಾರ್ಯರು 'ಅಹಂ ಬ್ರಹ್ಮಾಸ್ಮಿ', 'ತತ್ತ್ವಮಸಿ' – ಮುಂತಾದ ವಾಕ್ಯಗಳು ಪರಮಾರ್ಥವನ್ನು ತಿಳಿಸುವ ವಸ್ತುಬೋಧಕವಾಕ್ಯಗಳೆಂದೂ ಅವನ್ನು ಯಾವ ಕ್ರಿಯೆಗೂ ಶೇಷವಾಗಿ ಎಣಿಸಲಾಗದೆಂದೂ ಸಮನ್ವಯಸೂತ್ರದಲ್ಲಿ ಸಾರಿರುತ್ತಾರೆ. ಆ ಅಭಿಪ್ರಾಯಕ್ಕೆ ಈ ಪ್ರಕರಣದ ಉಪದೇಶವು ವಿರುದ್ಧವಾಗಿದೆ ಎಂಬುದು ಸ್ಪಷ್ಟ.

ಮಹಾವಾಕ್ಯಗಳನ್ನು ಜಪಕ್ಕೆ ಉಪಯೋಗಿಸುವ ಪದ್ಧತಿಯು ಪ್ರಚಾರಕ್ಕೆ ಬಂದಮೇಲೆ ಈ ಗ್ರಂಥವನ್ನು ಯಾರೋ ರಚಿಸಿರಬಹುದೆಂದು ಊಹಿಸುವದಕ್ಕೆ ಎಡೆಯಿದೆ. ವಸ್ತುಬೋಧಕವಾಕ್ಯಗಳೆಂದು ಎಣಿಸಿ ಪಠಿಸುವ ಜಿಜ್ಞಾಸುಗಳಿಗೂ ಈ ಗ್ರಂಥದ ಶ್ಲೋಕಗಳು ತತ್ತ್ವಾನುಸಂಧಾನಕ್ಕೆ ಸಹಾಯಕವಾಗುವಂತಿವೆ.

ದುರ್ಮುಖಿಸಂವತ್ಸರ,
ಚೈತ್ರ ಬಹುಳ 13, (1956) ಅನುವಾದಕ.

-----

॥ ಓಮ್ ॥

# ಬ್ರಹ್ಮಾನುಚಿನ್ತನಮ್

**ಅಹಮೇವ ಪರಂ ಬ್ರಹ್ಮ ವಾಸುದೇವಾಖ್ಯಮವ್ಯಯಮ್ ।**
**ಇತಿ ಸ್ಯಾನ್ನಿಶ್ಚಿತೋ ಮುಕ್ತೋ ಬದ್ಧ ಏವಾಽನ್ಯಥಾ ಭವೇತ್ ॥ ೧ ॥**

೧. ನಾನೇ ವಾಸುದೇವನೆಂಬ ಹೆಸರುಳ್ಳ ಅವ್ಯಯವಾದ ಪರಬ್ರಹ್ಮವು. ಹೀಗೆಂದು ನಿಶ್ಚಯವನ್ನು ಮಾಡಿಕೊಂಡಿರುವವನು ಮುಕ್ತನು, ಹೀಗಿಲ್ಲದಿದ್ದರೆ ಬದ್ಧನೇ ಆಗಿರುವನು.

**ಅಹಮೇವ ಪರಂ ಬ್ರಹ್ಮ ನಿಶ್ಚಿತಂ ಚಿತ್ತ ಚಿನ್ತ್ಯತಾಮ್ ।**
**ಚಿದ್ರೂಪತ್ವಾದಸಙ್ಗತ್ವಾದಬಾಧ್ಯತ್ವಾತ್ ಪ್ರಯತ್ನತಃ ॥ ೨ ॥**

೨. ಎಲೈ ಚಿತ್ತವೆ, ಚಿದ್ರೂಪವಾಗಿರುವದರಿಂದಲೂ ಅಸಂಗವಾಗಿರುವದರಿಂದಲೂ ಅಬಾಧ್ಯವಾಗಿರುವದರಿಂದಲೂ[1] 'ನಾನೇ ಪರಬ್ರಹ್ಮ'ವೆಂದು ನಿಶ್ಚಯಿಸಿ ಪ್ರಯತ್ನಪೂರ್ವಕವಾಗಿ ಚಿಂತಿಸುತ್ತಿರು.

**ಅಹಮೇವ ಪರಂ ಬ್ರಹ್ಮ ನ ಚಾಹಂ ಬ್ರಹ್ಮಣಃ ಪೃಥಕ್ ।**
**ಇತ್ಯೇವಂ ಸಮುಪಾಸೀತ ಬ್ರಾಹ್ಮಣೋ ಬ್ರಹ್ಮಣಿ ಸ್ಥಿತಃ ॥ ೩ ॥**

೩. 'ನಾನೇ ಪರಬ್ರಹ್ಮವು, ನಾನು ಬ್ರಹ್ಮಕ್ಕಿಂತ ಬೇರೆಯಲ್ಲ' – ಎಂದು ಬ್ರಾಹ್ಮಣನಾದವನು ಬ್ರಹ್ಮದಲ್ಲಿ ನೆಲೆನಿಂತು ಚಿಂತಿಸುತ್ತಿರಬೇಕು.[2]

**ಸರ್ವೋಪಾಧಿವಿನಿರ್ಮುಕ್ತಂ ಚೈತನ್ಯಂ ಚ ನಿರನ್ತರಮ್ ।**
**ತದ್ ಬ್ರಹ್ಮಾಹಮಿತಿ ಜ್ಞಾತ್ವಾ ಕಥಂ ವರ್ಣಾಶ್ರಮೀ ಭವೇತ್ ॥ ೪ ॥**

೪. 'ಯಾವ ಉಪಾಧಿಯೂ[3] ಇಲ್ಲದ ಅಖಂಡಚೈತನ್ಯವಿದೆಯಲ್ಲ,

---

1. ಚಿತ್ತವು ತೋರಿಕೊಳ್ಳುವ ರೂಪದಿಂದ ಚಿದಾಭಾಸವಾಗಿದೆ, ಸಸಂಗವಾಗಿದೆ, ಬಾಧ್ಯವೃತ್ತಿಗಳುಳ್ಳದ್ದು ಆಗಿದೆ ; ಆದರ ಪರಮಾರ್ಥರೂಪದಿಂದ ಚಿತ್ತು ಅಸಂಗವೂ ಅಬಾಧ್ಯವೂ ಆಗಿದೆ. 2. ಇದು ಜ್ಞಾನಾನಂತರದಲ್ಲಿ ಮಾಡುವ ಫಲರೂಪವಾದ ಅನುಸಂಧಾನ.

3. ಶರೀರ, ಇಂದ್ರಿಯ, ಪ್ರಾಣ, ಮನಸ್ಸು – ಮುಂತಾದ ಉಪಾಧಿಗಳಿಲ್ಲದ ಎಂದರ್ಥ.

ಆ ಬ್ರಹ್ಮವೇ ನಾನು' ಎಂದು ಅರಿತಮೇಲೆ ಹೇಗೆತಾನೆ ವರ್ಣಾಶ್ರಮಿಯಾಗಿದ್ದಾನು[1] ?

**ಅಹಂ ಬ್ರಹ್ಮಾಸ್ಮಿ ಯೋ ವೇದ ಸ ಸರ್ವಂ ಭವತಿ ತ್ವಿದಮ್ ।**
**ನಾಭೂತ್ಯಾ ಈಶತೇ ದೇವಾಸ್ತೇಷಾಮಾತ್ಮಾ ಭವೇದ್ಧಿ ಸಃ ॥ ೫ ॥**

೫. 'ನಾನು ಬ್ರಹ್ಮವಾಗಿರುವೆನು' ಎಂದು ಯಾವನು ಅರಿತುಕೊಳ್ಳುವನೋ ಅವನು ಇದೆಲ್ಲವೂ ಆಗುವನು[2] ; (ಅವನು) ಹಾಗಾಗದಿರುವಂತೆ ಮಾಡುವದಕ್ಕೆ ದೇವತೆಗಳೂ ಸಮರ್ಥರಾಗಿರುವದಿಲ್ಲ, ಏಕೆಂದರೆ ಅವನು ಅವರಿಗೂ ಆತ್ಮನಾಗಿರುವನು.[3]

**ಅನ್ಯೋಽಸಾವಹಮನ್ಯೋಽಸ್ಮೀತ್ಯುಪಾಸ್ತೇ ಯೋಽನ್ಯದೇವತಾಮ್ ।**
**ನ ಸ ವೇದ ನರೋ ಬ್ರಹ್ಮ ಸ ದೇವಾನಾಂ ಯಥಾ ಪಶುಃ ॥ ೬ ॥**

೬. 'ಈ ದೇವತೆ ಬೇರೆ, ನಾನು ಬೇರೆಯಾಗಿರುವೆನು' ಎಂದು (ತನ ಗಿಂತ) ಬೇರೆಯಾಗಿ ದೇವತೆಯನ್ನು ಯಾವನು ಉಪಾಸನೆ ಮಾಡುತ್ತಿರುವನೋ ಆ ಮನುಷ್ಯನು ಪರಬ್ರಹ್ಮವನ್ನು ಅರಿಯನು, ಅವನು ದೇವತೆಗಳಿಗೆ ಪಶುವಿನಂತೆ ಇರುವನು.[4]

**ಅಹಮಾತ್ಮಾ ನ ಚಾನ್ಯೋಽಸ್ಮಿ ಬ್ರಹ್ಮೈವಾಸ್ಮಿ ನ ಶೋಕಭಾಕ್ ।**
**ಸಚ್ಚಿದಾನನ್ದರೂಪೋಽಹಂ ನಿತ್ಯಮುಕ್ತಸ್ವಭಾವವಾನ್ ॥೭ ॥**

೭. ನಾನು ಆತ್ಮನೇ, ಬೇರೆಯಲ್ಲ[5] ; ನಾನು ಬ್ರಹ್ಮವೇ, ಶೋಕವನ್ನು ಅನುಭವಿಸುವವನಲ್ಲ ; ನಾನು ಸಚ್ಚಿದಾನಂದರೂಪನು, ನಿತ್ಯಮುಕ್ತವಾದ ಸ್ವಭಾವವುಳ್ಳವನು.

---

1.ಶರೀರಾದಿಗಳ ದೃಷ್ಟಿಯಿಂದಲೇ ವರ್ಣಾಶ್ರಮಗಳು ಆತ್ಮನಲ್ಲಿ ತೋರುತ್ತಿರುವವು ; ಆದ್ದರಿಂದ ಶುದ್ಧಾತ್ಮನಲ್ಲಿ ಯಾವ ವರ್ಣವಾಗಲಿ ಆಶ್ರಮವಾಗಲಿ ಇರಲು ಕಾರಣವಿಲ್ಲ.

2.ಸರ್ವಾತ್ಮಭಾವವನ್ನು ಹೊಂದುವನು. 3. ಬೃಹದಾರಣ್ಯಕ ೧–೪–೧೦ರ ಅಭಿಪ್ರಾಯವಿದು. ಬ್ರಹ್ಮಜ್ಞಾನಿಯು ಎಲ್ಲರಿಗೂ ಆತ್ಮನಾಗಿರುವದರಿಂದ ದೇವತೆಗಳಿಗೂ ಆತ್ಮನಾಗಿರುತ್ತಾನೆ ; ಆದ್ದರಿಂದ ಅವರು ತಮ್ಮ ಆತ್ಮನಾದ ಜ್ಞಾನಿಗೆ ಸರ್ವಾತ್ಮಭಾವವು ಬಾರದಂತೆ ಮಾಡಲಾರರು. ಪರಿಚ್ಛಿನ್ನಾತ್ಮಭಾವನೆಯುಳ್ಳ ಕರ್ಮಿಗಳಿಗೆ ಜ್ಞಾನವಾಗದಂತೆ ದೇವತೆಗಳು ಅಡ್ಡಿಮಾಡಬಹುದು. 4. ಇದೂ ಬೃ.೧–೪–೧೦ರ ಅಭಿಪ್ರಾಯ, ಉಪಾಸ್ಯವಾದ ದೇವತೆಯು ತನಗಿಂತ ಬೇರೆ ಎಂದು ತಿಳಿದವನು ಆತ್ಮಜ್ಞನಲ್ಲ; ಅವನು ದೇವತೆಗಳ ಆರಾಧನೆಯನ್ನು ಮಾಡಿ ಫಲವನ್ನು ಪಡೆಯಬೇಕಾಗಿರುವದರಿಂದ ಯಜಮಾನನ ಸೇವೆಯಿಂದ ಆಹಾರಾದಿಗಳನ್ನು ಪಡೆಯುವ ಪಶುವಿನಂತೆ ಇರುವನು ಎಂದರ್ಥ. 5. ದೇಹಾದಿಗಳಲ್ಲ.

**ಆತ್ಮಾನಂ ಸತತಂ ಬ್ರಹ್ಮ ಸಂಭಾವ್ಯ ವಿಹರನ್ತಿ ಯೇ ।**
**ನ ತೇಷಾಂ ದುಷ್ಕೃತಂ ಕಿಂಚಿದ್ದುಷ್ಕೃತೋತ್ಥಾ ನ ಚಾಪದಃ ॥೮॥**

೮. ಯಾರು ತಮ್ಮ ಆತ್ಮನು ಬ್ರಹ್ಮವೆಂದು ಯಾವಾಗಲೂ ಭಾವಿಸುತ್ತಾ ವಿಹರಿಸುತ್ತಿರುವರೋ ಅವರಿಗೆ ಯಾವ ಪಾಪವಾಗಲಿ, ಪಾಪದಿಂದಾದ ಆಪತ್ತುಗಳಾಗಲಿ ಇರುವದಿಲ್ಲ.

**ಆತ್ಮಾನಂ ಸತತಂ ಬ್ರಹ್ಮ ಸಂಭಾವ್ಯ ವಿಹರೇತ್ಸುಖಮ್ ।**
**ಕ್ಷಣಂ ಬ್ರಹ್ಮಾಹಮಸ್ಮೀತಿ ಯಃ ಕುರ್ಯಾದಾತ್ಮಚಿನ್ತನಮ್ ॥೯॥**
**ತನ್ಮಹಾಪಾತಕಂ ಹನ್ತಿ ತಮಃ ಸೂರ್ಯೋದಯೋ ಯಥಾ**

೯–೯½ ತಾನೇ ಆತ್ಮನೆಂದು ಸಂತತವಾಗಿ ಭಾವಿಸಿಕೊಳ್ಳುತ್ತಾ ಸುಖದಿಂದಿರುತ್ತಿರಬೇಕು. ಯಾವನು ಒಂದು ಕ್ಷಣಹೊತ್ತು ನಾನು ಬ್ರಹ್ಮವೆಂದು ಆತ್ಮಚಿಂತನೆಯಲ್ಲಿರುವನೋ ಅದು – ಸೂರ್ಯೋದಯವು ಕತ್ತಲೆಯನ್ನು ತೊಲಗಿಸುವಂತೆ ಮಹಾಪಾತಕವನ್ನು ನಾಶಮಾಡುತ್ತದೆ.

**ಅಜ್ಞಾನಾದ್ ಬ್ರಹ್ಮಣೋ ಜಾತಮಾಕಾಶಂ ಬುದ್ಬುದೋಪಮಮ್ ॥೧೦॥**

**ಆಕಾಶಾದ್ ವಾಯುರುತ್ಪನ್ನೋ ವಾಯೋಸ್ತೇಜಸ್ತತಃ ಪಯಃ ।**
**ಅದ್ಭ್ಯಶ್ಚ ಪೃಥಿವೀ ಜಾತಾ ತತೋ ವ್ರೀಹಿಯವಾದಿಕಮ್ ॥೧೧॥**

**ಪೃಥಿವ್ಯಪ್ಸು ಪಯೋ ವಹ್ನೌ ವಹ್ನಿರ್ವಾಯೌ ನಭಸ್ಯಸೌ ।**
**ನಭೋಽಪ್ಯವ್ಯಾಕೃತೇ ತಚ್ಚ ಶುದ್ಧೇ ಶುದ್ಧೋಽಸ್ಮ್ಯಹಂ ಹರಿಃ ॥೧೨॥**

೧೦–೧೨. ಬ್ರಹ್ಮದ ಅಜ್ಞಾನದಿಂದ[1] ಆಕಾಶವು ಕಡಲಿನಲ್ಲಿ ನೀರುಗುಳ್ಳೆಯಂತೆ ಉಂಟಾಯಿತು. ಆಕಾಶದಿಂದ ವಾಯು ಹುಟ್ಟಿತು, ವಾಯುವಿನಿಂದ ತೇಜಸ್ಸು, ಅದರಿಂದ ಅಪ್ಪು, ಅಪ್ಪಿನಿಂದ ಪೃಥಿವಿಯು ಹುಟ್ಟಿತು. ಅದರಿಂದ ಬತ್ತ ಜವೆ –ಮುಂತಾದದ್ದು ಉಂಟಾಯಿತು. ಪೃಥಿವಿಯು ಅಪ್ಪಿನಲ್ಲಿ, ಅಪ್ಪು ತೇಜಸ್ಸಿನಲ್ಲಿ, ತೇಜಸ್ಸು ವಾಯುವಿನಲ್ಲಿ, ಅದು ಆಕಾಶದಲ್ಲಿ, ಆಕಾಶವೂ

---

1. ಬ್ರಹ್ಮವನ್ನರಿಯದ್ದರಿಂದ, ಅಜ್ಞಾತಬ್ರಹ್ಮದಿಂದ – ಎಂದೂ ಅರ್ಥವನ್ನು ಮಾಡಿಕೊಳ್ಳಬಹುದು ; ಆದರೆ ಇಲ್ಲಿ ಅಜ್ಞಾನಶಬ್ದವನ್ನು ಅವ್ಯಾಕೃತವೆಂಬ ಅರ್ಥದಲ್ಲಿಯೇ ಪ್ರಯೋಗಿಸಿರುವಂತೆ ಕಾಣುತ್ತದೆ.

ಅವ್ಯಾಕೃತದಲ್ಲಿ ಅದು ಶುದ್ಧನಾದ (ಪರಮಾತ್ಮನಲ್ಲಿ (ಲಯವಾಗುವದು).[1] ನಾನು ಶುದ್ಧನಾದ ಹರಿಯೇ ಆಗಿರುವೆನು.

**ಅಹಂ ವಿಷ್ಣುರಹಂ ವಿಷ್ಣುರಹಂ ವಿಷ್ಣುರಹಂ ಹರಿಃ ।**
**ಕರ್ತೃಭೋಕ್ತ್ರಾದಿಕಂ ಸರ್ವಂ ತದವಿದ್ಯೋತ್ಥಮೇವ ಚ ॥೧೩॥**

೧೩. ನಾನು ವಿಷ್ಣುವು, ನಾನು ವಿಷ್ಣುವು, ನಾನು ವಿಷ್ಣುವು, ನಾನು ಹರಿಯು. ಕರ್ತೃತ್ವಭೋಕ್ತೃತ್ವಾದಿಗಳೆಲ್ಲವೂ ಅದರ ಅವಿದ್ಯೆಯಿಂದ ಉಂಟಾದದ್ದು.

**ಅಚ್ಯುತೋಽಹಮನನ್ತೋಽಹಂ ಗೋವಿನ್ದೋಽಹಮಹಂ ಹರಿಃ ।**
**ಆನನ್ದೋಽಹಮಶೇಷೋಽಹಮಜೋಽಹಮಮೃತೋಽಸ್ಮ್ಯಹಮ್ ॥೧೪॥**

೧೪. ನಾನು ಅಚ್ಯುತನು, ನಾನು ಅನಂತನು, ನಾನು ಗೋವಿಂದನು[2], ನಾನು ಹರಿಯು. ಆನಂದಸ್ವರೂಪನು ನಾನು, ನಿರ್ವಿಶೇಷನು ನಾನು, ಜನ್ಮರಹಿತನು ನಾನು, ನಾನು ಮರಣರಹಿತನಾಗಿರುವೆನು.

**ನಿತ್ಯೋಽಹಂ ನಿರ್ವಿಕಲ್ಪೋಽಹಂ ನಿರಾಕಾರೋಽಹಮವ್ಯಯಃ ।**
**ಸಚ್ಚಿದಾನನ್ದರೂಪೋಽಹಂ ಪಞ್ಚಕೋಶಾತಿಗೋಽಸ್ಮ್ಯಹಮ್ ॥೧೫॥**

೧೫. ನಿತ್ಯನು ನಾನು, ನಿರ್ವಿಕಲ್ಪನು ನಾನು, ನಾನು ನಿರಾಕಾರನು, ಅವ್ಯಯನು, ಸಚ್ಚಿದಾನಂದರೂಪನು ನಾನು, ನಾನು ಪಂಚಕೋಶಾತೀತನಾಗಿರುವೆನು.

**ಅಕರ್ತಾಹಮಭೋಕ್ತಾಹಮಸಙ್ಗಃ ಪರಮೇಶ್ವರಃ ।**
**ಸದಾ ಮತ್ಸಂನಿಧಾನೇನ ಚೇಷ್ಟತೇ ಸರ್ವಮಿನ್ದ್ರಿಯಮ್ ॥೧೬॥**

೧೬. ನಾನು ಕರ್ತೃವಲ್ಲ, ನಾನು ಭೋಕ್ತೃವಲ್ಲ ; ನಾನು ಅಸಂಗನು, ಪರಮೇಶ್ವರನು. ಯಾವಾಗಲೂ ನನ್ನ ಸಾಂನಿಧ್ಯದಿಂದ ಇಂದ್ರಿಯವೆಲ್ಲವೂ ವ್ಯಾಪಾರಮಾಡುತ್ತಿರುವದು.[3]

---

1. ಈ ಲಯಕ್ರಮವು ಸೂ.ಭಾ. ೨–೩–೧೪ರಲ್ಲಿ (ಭಾ. ಭಾ. ೧೧೫ರಲ್ಲಿ) ವರ್ಣಿತವಾಗಿರುತ್ತದೆ. ಭಾಷ್ಯದಲ್ಲಿ ಉದಾಹೃತವಾಗಿರುವ ವಾಕ್ಯದಲ್ಲಿ ಅವ್ಯಕ್ತವೆಂದಿರುವದನ್ನೇ ಇಲ್ಲಿ ಅವ್ಯಾಕೃತ, ಅಜ್ಞಾನ– ಎಂಬ ಹೆಸರುಗಳಿಂದ ಕರೆದಿದೆ. 2. ಅಚ್ಯುತಾನಂತಗೋವಿಂದ– ಎಂಬ ನಾಮತ್ರಯವನ್ನು ಕರ್ಮಾಂತದಲ್ಲಿ ಲೋಪದೋಷಪ್ರಾಯಶ್ಚಿತ್ತವಾಗಿ ಪ್ರಯೋಗಿಸುತ್ತಾರೆ.

3. ಕೇ.೧–೧, ೨ ರ ಸೂಚನೆ.

**ಆದಿಮಧ್ಯಾನ್ತಮುಕ್ತೋಽಹಂ ನ ಬದ್ಧೋಽಹಂ ಕದಾಚನ ।**
**ಸ್ವಭಾವನಿರ್ಮಲಃ ಶುದ್ಧಃ ಸ ಏವಾಹಂ ನ ಸಂಶಯಃ ॥೧೭॥**

೧೭. ಮೊದಲು, ನಡುವೆ, ಕೊನೆ – ಇವುಗಳಿಲ್ಲದವನು ನಾನು ; ನಾನು ಯಾವಾಗಲೂ ಬದ್ಧನಲ್ಲ ; (ಆಕಾಶದಂತೆ) ಸ್ವಭಾವದಿಂದಲೇ ನಿರ್ಮಲನೂ ಶುದ್ಧನೂ ಆಗಿರುವ ಆ (ಆತ್ಮನೇ) ನಾನು, ಸಂಶಯವಿಲ್ಲ.

**ಬ್ರಹ್ಮೈವಾಹಂ ನ ಸಂಸಾರೀ ಮುಕ್ತೋಽಹಮಿತಿ ಭಾವಯೇತ್ ।**
**ಅಶಕ್ನುವನ್ ಭಾವಯಿತುಂ ವಾಕ್ಯಮೇತತ್ ಸದಾಽಭ್ಯಸೇತ್ ॥೧೮॥**

೧೮. ನಾನು ಬ್ರಹ್ಮವೇ, ಸಂಸಾರಿಯಲ್ಲ, ನಾನು ಮುಕ್ತನು – ಎಂದು ಭಾವಿಸುತ್ತಿರಬೇಕು ; (ಹೀಗೆ) ಭಾವಿಸುತ್ತಿರುವದಕ್ಕೆ ಶಕ್ತನಲ್ಲದವನು ಈ ವಾಕ್ಯವನ್ನು ಯಾವಾಗಲೂ ಅಭ್ಯಾಸಮಾಡುತ್ತಿರಬೇಕು.[1]

**ಯದಭ್ಯಾಸೇನ ತದ್ಭಾವೋ ಭವೇದ್ಭ್ರಮರಕೀಟವತ್ ।**
**ಅತ್ರಾಪಹಾಯ ಸಂದೇಹಮಭ್ಯಸೇತ್ ಕೃತನಿಶ್ಚಯಃ ॥೧೯॥**

೧೯. ಈ (ವಾಕ್ಯಾ)ಭ್ಯಾಸದಿಂದ ಬ್ರಮರಕೀಟದಂತೆ[2] ತದ್ರೂಪನೇ ಆಗಿಬಿಡುವನು. ಈ ವಿಷಯದಲ್ಲಿ ಸಂಶಯವನ್ನು ಬಿಟ್ಟು ನಿಶ್ಚಯವನ್ನು ಮಾಡಿಕೊಂಡು ಅಭ್ಯಾಸಮಾಡಬೇಕು.

**ಧ್ಯಾನಯೋಗೇನ ಮಾಸೈಕಾದ್ಬ್ರಹ್ಮಹತ್ಯಾಂ ವ್ಯಪೋಹತಿ ।**
**ಸಂವತ್ಸರಂ ಸದಾಭ್ಯಾಸಾತ್ ಸಿದ್ಧ್ಯಷ್ಟಕಮವಾಪ್ನುಯಾತ್ ॥೨೦॥**

೨೦. ಒಂದು ತಿಂಗಳು ಮಾಡಿದ (ಈ) ಧ್ಯಾನಯೋಗದಿಂದ ಬ್ರಹ್ಮಹತ್ಯೆಯನ್ನು ತೊಲಗಿಸಿಕೊಳ್ಳುತ್ತಾನೆ. ಒಂದು ಸಂವತ್ಸರದವರೆಗೆ ನಿತ್ಯವೂ ಅಭ್ಯಾಸಮಾಡುವದರಿಂದ ಅಷ್ಟಸಿದ್ಧಿಗಳನ್ನು ಹೊಂದುವನು.

**ಯಾವಜ್ಜೀವಂ ಸದಾಭ್ಯಾಸಾಜ್ಜೀವನ್ಮುಕ್ತೋ ಭವೇದ್ಯತಿಃ ॥೨೦ ½॥**

೨೦ ½. ಹೀಗೆ ಬದುಕಿರುವವರೆಗೂ ಯಾವಾಗಲೂ ಅಭ್ಯಾಸ ಮಾಡುವದರಿಂದ ಯತಿಯು ಜೀವನ್ಮುಕ್ತನಾಗುವನು.

---

1. ನಾನು ಬ್ರಹ್ಮವೆಂಬ ಭಾವನೆಯನ್ನಾಗಲಿ, ''ಅಹಂಬ್ರಹ್ಮಾಸ್ಮಿ''ವಾಕ್ಯವನ್ನಾಗಲಿ ಶ್ರುತಿಯಲ್ಲಿ ವಿಧಿಸಿರುವಂತೆ ಕಾಣುವದಿಲ್ಲ, ಪೀಠಿಕೆಯನ್ನು ನೋಡಿ. 2. ಬ್ರಮರವು ಗೂಡಿನಲ್ಲಿಟ್ಟ ಹುಳುವು ಅಂಜಿಕೆಯಿಂದ ಸದಾ ಬ್ರಮರವನ್ನೇ ಚಿಂತಿಸುತ್ತಿದ್ದು ಬ್ರಮರಸಾರೂಪ್ಯವನ್ನು ಪಡೆಯುತ್ತದೆ ಎಂದು ನಂಬಿಕೆ.

ನಾಹಂ ದೇಹೋ ನ ಚ ಪ್ರಾಣೋ ನೇನ್ದ್ರಿಯಾಣಿ ತಥೈವ ಚ ॥೨೧॥

ನ ಮನೋಽಹಂ ನ ಬುದ್ಧಿಶ್ಚ ನೈವ ಚಿತ್ತಮಹಂಕೃತಿಃ ।
ನಾಽಹಂ ಪೃಥ್ವೀ ನ ಸಲಿಲಂ ನ ಚ ವಹ್ನಿಸ್ತಥಾಽನಿಲಃ ॥೨೨॥

ನ ಚಾಕಾಶೋ ನ ಶಬ್ದಶ್ಚ ನ ಚ ಸ್ಪರ್ಶಸ್ತಥಾ ರಸಃ ।
ನಾಽಹಂ ಗನ್ಧೋ ನ ರೂಪಂ ಚ ನ ಮಾಯಾಽಹಂ ನ ಸಂಸೃತಿಃ ॥೨೩॥

ಸದಾ ಸಾಕ್ಷಿಸ್ವರೂಪತ್ವಾಚ್ಛಿವ ಏವಾಽಸ್ಮಿ ಕೇವಲಃ ॥೨೩ ½॥

೨೧–೨೩೧/೨. ನಾನು ದೇಹವಲ್ಲ, ಪ್ರಾಣವಲ್ಲ, ಇಂದ್ರಿಯಗಳಲ್ಲ, ನಾನು ಮನಸ್ಸಲ್ಲ, ಬುದ್ಧಿಯಲ್ಲ, ಚಿತ್ತವಲ್ಲವೇ ಅಲ್ಲ, ಅಹಂಕಾರವೂ ಅಲ್ಲ; ನಾನು ಪೃಥ್ವಿಯಲ್ಲ, ಅಪ್ಪಲ್ಲ, ತೇಜಸ್ಸೂ ಅಲ್ಲ; ಹಾಗೂ ವಾಯುವೂ ಅಲ್ಲ, ಆಕಾಶವೂ ಅಲ್ಲ, ಶಬ್ದವಲ್ಲ, ಸ್ಪರ್ಶವಲ್ಲ; ಹಾಗೂ ರಸವಲ್ಲ, ನಾನು ಗಂಧವಲ್ಲ, ರೂಪವಲ್ಲ, ಮಾಯೆಯೂ ಅಲ್ಲ, ಸಂಸಾರವೂ ಅಲ್ಲ.[1] ಯಾವಾಗಲೂ ಸಾಕ್ಷಿಸ್ವರೂಪವಾಗಿರುವದರಿಂದ[2] ಕೇವಲ ಶಿವನೇ ಆಗಿರುವೆನು.

ಮಯ್ಯೇವ ಸಕಲಂ ಜಾತಂ ಮಯಿ ಸರ್ವಂ ಪ್ರತಿಷ್ಠಿತಮ್ ॥೨೪॥

ಮಯಿ ಸರ್ವಂ ಲಯಂ ಯಾತಿ ತದ್ಬ್ರಹ್ಮಾಸ್ಮ್ಯಹಮದ್ವಯಮ್ ।
ಸರ್ವಜ್ಞೋಽಹಮನನ್ತೋಽಹಂ ಸರ್ವೇಶಃ ಸರ್ವಶಕ್ತಿಮಾನ್ ॥೨೫ ½॥
ಆನನ್ದಃ ಸತ್ಯಬೋಧೋಽಹಮಿತಿ ಬ್ರಹ್ಮಾನುಚಿನ್ತನಮ್ ॥೨೬॥

೨೪–೨೬. ನನ್ನಲ್ಲಿಯೇ ಸಕಲವೂ ಹುಟ್ಟಿರುವದು, ನನ್ನಲ್ಲಿಯೇ ಎಲ್ಲವೂ ಪ್ರತಿಷ್ಠಿತವಾಗಿರುತ್ತದೆ, ನನ್ನಲ್ಲಿಯೇ ಎಲ್ಲವೂ ಲಯವನ್ನು ಹೊಂದಿರುತ್ತದೆ. ಆದ್ದರಿಂದ ನಾನು ಅದ್ವಯವಾದ ಬ್ರಹ್ಮವೇ ಆಗಿರುವೆನು.[3] ನಾನು ಸರ್ವಜ್ಞನು, ನಾನು ಅನಂತನು, ಸರ್ವೇಶ್ವರನು, ಸರ್ವಶಕ್ತಿಯುತನು, ಆನಂದಸ್ವರೂಪನು,

1. ಅನಾತ್ಮದಿಂದ ಆತ್ಮನನ್ನು ವಿಂಗಡಿಸಿ ತಿಳಿಯುವದಕ್ಕೆ ಮಾಯೆಸಂಸಾರಗಳನ್ನು ಸ್ವತಂತ್ರವಾಗಿ ಅನಾತ್ಮವರ್ಗದಲ್ಲಿ ಉಲ್ಲೇಖಿಸಿರುವದು ಬಹಳ ಕಡೆಯಲ್ಲಿಲ್ಲ.

2. ಗ್ರಂಥಕಾರರು ಸಾಕ್ಷಿಸ್ವರೂಪವು ಸ್ವಯಂಸಿದ್ಧವೆಂಬುದನ್ನು ಎತ್ತಿಹಿಡಿಯಲಿಲ್ಲವೆಂಬುದು ಲಕ್ಷಿಸತಕ್ಕದ್ದಾಗಿದೆ.

3. ಈ ಶ್ಲೋಕವು ಕೈವಲ್ಯೋಪನಿಷತ್ತಿನಲ್ಲಿದೆ. ಕೈ. ೧–೧೯ ನೋಡಿರಿ. ಕೊನೆಯ ಪಾದವು 'ತದ್ಬ್ರಹ್ಮಾದ್ವಯಮಸ್ಮ್ಯಹಮ್' ಎಂದಿದೆ.

ಸತ್ಯಜ್ಞಾನಸ್ವರೂಪನು– ಹೀಗೆಂಬುದು ಬ್ರಹ್ಮಾನುಚಿಂತನವು.[1]

**ಅಯಂ ಪ್ರಪಞ್ಚೋ ಮಿಥ್ಯೈವ ಸತ್ಯಂ ಬ್ರಹ್ಮಾಽಹಮವ್ಯಯಮ್ ॥೨೬॥**

**ಅತ್ರ ಪ್ರಮಾಣಂ ವೇದಾನ್ತಾ ಗುರವೋಽನುಭವಸ್ತಥಾ ॥**

**ಬ್ರಹ್ಮೈವಾಽಹಂ ನ ಸಂಸಾರೀ ನ ಚಾಹಂ ಬ್ರಹ್ಮಣಃ ಪೃಥಕ್ ॥೨೭॥**

**ನಾಹಂ ದೇಹೋ ನ ಮೇ ದೇಹಃ ಕೇವಲೋಽಹಂ ಸನಾತನಃ ।**

**ಏಕಮೇವಾಽದ್ವಿತೀಯಂ ವೈ ಬ್ರಹ್ಮಣೋ ನೇಹ ಕಿಂಚನ ॥೨೮॥**

೨೬೩–೨೮. ಈ ಪ್ರಪಂಚವು ಮಿಥ್ಯೆಯೇ, ನಾನು ಅವ್ಯಯವಾದ ಸತ್ಯವಾದ ಬ್ರಹ್ಮವೇ. ಈ ವಿಷಯದಲ್ಲಿ ಪ್ರಮಾಣವು ವೇದಾಂತಗಳು, ಗುರುಗಳು ಮತ್ತು ಅನುಭವವು.[2]

ನಾನು ಬ್ರಹ್ಮವೇ, ಸಂಸಾರಿಯಲ್ಲ, ನಾನು ಬ್ರಹ್ಮಕ್ಕಿಂತ ಬೇರೆಯೂ ಅಲ್ಲ, ನಾನು ದೇಹವಲ್ಲ, ನನಗೆ ದೇಹವಿಲ್ಲ ; ನಾನು ಸನಾತನನಾದ ಕೇವಲಾತ್ಮನು. ಬ್ರಹ್ಮವು ತಾನೊಂದೇ ಅದ್ವಿತೀಯವಾಗಿರುವದಷ್ಟೆ, ಆ ಬ್ರಹ್ಮಕ್ಕಿಂತ ಬೇರೆಯಾಗಿ ಮತ್ತೆಯಾವದೂ ಇರುವದಿಲ್ಲ.[3]

**ಹೃದಯಕಮಲಮಧ್ಯೇ ದೀಪವದ್ವೇದಸಾರಂ**
**ಪ್ರಣವಮಯಮತರ್ಕ್ಯಂ ಯೋಗಿಭಿರ್ಧ್ಯಾನಗಮ್ಯಮ್ ।**
**ಹರಿಗುರುಶಿವಯೋಗಂ ಸರ್ವಭೂತಸ್ಥಮೇಕಂ**
**ಸಕೃದಪಿ ಮನಸಾ ವೈ ಚಿನ್ತಯೇದ್ಯಃ ಸ ಮುಕ್ತಃ ॥ ೨೯ ॥**

೨೯. ಹೃದಯಕಮಲದೊಳಗೆ ದೀಪದಂತೆ ವೇದಸಾರವೂ ಪ್ರಣವ ಮಯವೂ ಅತರ್ಕ್ಯವೂ ಯೋಗಿಗಳು ಧ್ಯಾನದಿಂದ ಅರಿತುಕೊಳ್ಳತಕ್ಕದ್ದಾಗಿಯೂ ಹರಿಗುರುಶಿವರ ಸಂಬಂಧವುಳ್ಳದ್ದೂ ಸರ್ವಭೂತಗಳಲ್ಲಿಯೂ ಇರುವದೂ ಆಗಿರುವ (ಬ್ರಹ್ಮವನ್ನು) ಒಂದುಸಲವಾದರೂ ಯಾವನು ಮನಸ್ಸಿನಲ್ಲಿ ಚಿಂತಿಸುವನೋ ಅವನೇ ಮುಕ್ತನು.[4]

---

1. ಪ್ರಕರಣಕ್ಕೆ ''ಬ್ರಹ್ಮಾನುಚಿಂತನ''ವೆಂಬ ಹೆಸರು ಇದರಿಂದ ಬಂದಿರಬಹುದು.

2. ವೇದಾಂತಗಳೆಂದರೆ ಉಪನಿಷತ್ತು. ಶಾಸ್ತ್ರಗುರುವಚನವು ಹೇಗೆ ಪ್ರಮಾಣವೆಂಬುದನ್ನಾಗಲಿ, ಆತ್ಮಾನುಭವದ ವೈಭವವನ್ನಾಗಲಿ ಇಲ್ಲಿ ತಿಳಿಸಿರುವದಿಲ್ಲ.

3. ಈ ಎರಡುವಾಕ್ಯಗಳನ್ನು ಯಾರೋ ಹೆಚ್ಚಾಗಿ ಸೇರಿಸಿರುವಂತೆ ಕಾಣುತ್ತದೆ.

4. ಈ ಶ್ಲೋಕವು ಇಲ್ಲಿ ಏತಕ್ಕೆ ಬಂದಿತೆಂಬುದು ತಿಳಿಯಲಿಲ್ಲ. ಇದರಲ್ಲಿರುವ ಕೆಲವು ವಿಶೇಷಣಗಳ ಅರ್ಥವೂ ಸ್ಪಷ್ಟವಾಗಿರುವದಿಲ್ಲ.

# ಶ್ಲೋಕಾನುಕ್ರಮಣಿಕೆ


| ಪ್ರತೀಕಗಳು | ಶ್ಲೋಕಸಂಖ್ಯೆ |
|---|---|
| ಅಕರ್ತಾಹಮಭೋಕ್ತಾಹಮ್ | ೧೬ |
| ಅಚ್ಯುತೋಽಹಮನನ್ತೋಽಹಂ | ೧೪ |
| ಅತ್ರ ಪ್ರಮಾಣಂ ವೇದಾನ್ತಾಃ | ೨೭ |
| ಅನ್ಯೋಽಸಾವಹಮನ್ಯೋಽಸ್ಮಿ | ೬ |
| ಅಹಂ ವಿಷ್ಣುರಹಂ ವಿಷ್ಣುಃ | ೧೩ |
| ಅಹಮಾತ್ಮಾ ನ ಚಾನ್ಯೋಽಸ್ಮಿ | ೭ |
| ಅಹಮೇವ ಪರಂ ಬ್ರಹ್ಮ | ೩ |
| ,, ,, | ೨ |
| ,, ,, | ೧ |
| ಅಹಂ ಬ್ರಹ್ಮಾಸ್ಮಿ ಯೋ ವೇದ | ೫ |
| ಆಕಾಶಾದ್ವಾಯುರುತ್ಪನ್ನೋ | ೧೧ |
| ಆತ್ಮಾನಂ ಸತತಂ ಬ್ರಹ್ಮ | ೮ |
| ಆತ್ಮಾನಂ ಸತತಂ ಬ್ರಹ್ಮ | ೯ |
| ಆದಿಮಧ್ಯಾನ್ತಮುಕ್ತೋಽಹಂ | ೧೭ |
| ಆನನ್ದಃ ಸತ್ಯಬೋಧೋಽಹಮ್ | ೨೬ |
| ತನ್ಮಹಾಪಾತಕಂ ಹನ್ತಿ | ೧೦ |
| ಧ್ಯಾನಯೋಗೇನ ಮಾಸೈಕಾತ್ | ೧೯ |
| ನ ಚಾಕಾಶೋ ವ ಶಬ್ದಶ್ಚ | ೨೩ |
| ನ ಮನೋಽಹಂ ನ ಬುದ್ಧಿಶ್ಚ | ೨೨ |
| ನಾಹಂ ದೇಹೋ ನ ಮೇ ದೇಹಃ | ೧೨ |
| ನಿತ್ಯೋಽಹಂ ನಿರ್ವಿಕಲ್ಪೋಽಹಂ | ೧೫ |
| ಪೃಥಿವ್ಯಪ್ಸು ಪಯೋ ವಹ್ನೌ | ೧೨ |
| ಬ್ರಹ್ಮೈವಾಽಹಂ ನ ಸಂಸಾರೀ | ೧೮ |
| ಮಯಿ ಸರ್ವಂ ಲಯಂ ಯಾತಿ | ೨೫ |
| ಯದಭ್ಯಾಸೇನ ತದ್ಭಾವೋ | ೧೯ |
| ಯಾವಜ್ಜೀವಂ ಸದಾಭ್ಯಾಸಾತ್ | ೨೧ |
| ಸದಾ ಸಾಕ್ಷಿಸ್ವರೂಪತ್ವಾತ್ | ೨೪ |
| ಸರ್ವೋಪಾಧಿವಿನಿರ್ಮುಕ್ತಂ | ೪ |
| ಹೃದಯಕಮಲಮಧ್ಯೇ | ೨೯ |

# ಶಬ್ದಾನುಕ್ರಮಣಿಕೆ

ಇಲ್ಲಿ * ನಕ್ಷತ್ರಚಿಹ್ನೆಯು ಆಯಾ ಅರ್ಥದಲ್ಲಿ ಆಯಾ ಶಬ್ದವು ಭಾಷ್ಯದಲ್ಲಿ ಪ್ರಚುರವಾಗಿಲ್ಲವೆಂಬುದನ್ನು ಸೂಚಿಸುವದು.

೧. **ಅಬಾಧ್ಯಮ್**–
ಹುಸಿಯೆಂದು ಜ್ಞಾನದಿಂದ ಹೊಡೆದು ಹಾಕಲಾಗದ ೨

೨. * **ಅಭ್ಯಾಸಃ**–
ಅಹಂ ಬ್ರಹ್ಮಾಸ್ಮಿ ಎಂಬ ಭಾವನೆಯನ್ನಾಗಲಿ ವಾಕ್ಯವನ್ನಾಗಲಿ ಮತ್ತೆಮತ್ತೆ ಜಪಿಸುವದು, ೧೯, ೨೧.

೩. * **ಅವಿದ್ಯೋತ್ಥಮ್**–
ಅಜ್ಞಾನದಿಂದುಂಟಾದ, ೧೩.

೪. ***ಧ್ಯಾನಯೋಗಃ**–
ನಾನು ಬ್ರಹ್ಮವು ಎಂದು ಚಿಂತಿಸುತ್ತಿರುವ ಯೋಗವು, ೨೦.

೫. ***ನಿರ್ವಿಕಲ್ಪಃ**–
ಯಾವ ವಿಶೇಷವೂ ಇಲ್ಲದ, ೧೫.

೬. ***ಬ್ರಹ್ಮಾನುಚಿನ್ತನಮ್**–
ಬ್ರಹ್ಮವನ್ನು ಧ್ಯಾನಿಸುತ್ತಿರುವದು, ೨೬.

೭. **ಮಹಾಪಾತಕಮ್**–
ಸ್ವರ್ಣಸ್ತೇಯವೇ ಮುಂತಾದ ಹೆಚ್ಚಿನ ಪಾಪ, ೧೦.

೮. **ವರ್ಣಾಶ್ರಮಿ**–
ಬ್ರಾಹ್ಮಣಾದಿವರ್ಣಗಳು ಮತ್ತು ಬ್ರಹ್ಮಚರ್ಯಾದಿ ಆಶ್ರಮಗಳು – ಇವುಗಳಿರುವವನು, ೪.

೯. **ಸಚ್ಚಿದಾನನ್ದರೂಪಃ**–
ಸತ್ಯವೂ ಜ್ಞಾನವೂ, ಸುಖವೂ ಸ್ವರೂಪ ವಾಗಿರುವ ಆತ್ಮ ೭.

೧೦. **ಸಂಭಾವ್ಯ**–
ಭಾವನೆಮಾಡುತ್ತಾ ೮. ೯.

೧೧. **ಸಾಕ್ಷೀ**–
ಎಲ್ಲವನ್ನೂ ನೇರಾಗಿ ನೋಡುವ ಆತ್ಮ ೨೪.

೧೨. ***ಹರಿಗುರುಶಿವಯೋಗಮ್**–
ಹರಿ, ಗುರು, ಶಿವ– ಇವರ ಸಂಬಂಧವುಳ್ಳ ತತ್ತ್ವ, ೨೯.